ನವಸಾಕ್ಷರ ಪುಸ್ತಕ ಮಾಲೆ ೪೨

# ಡಾ|| ಬಿ.ಆರ್. ಅಂಬೇಡ್ಕರ್

ಎಚ್. ಎನ್. ಶುಭದಾ





ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

...ಲೆ

...ಯ

...ಎಸ್.

...ಾಲಯ

...ಟ

ಹಾ. ಮಾ. ನಾಯಕ
ಎಚ್. ನರಸಿಂಹಯ್ಯ
ಜಿ. ನಾರಾಯಣ
ಎಲ್. ಎಸ್. ಶೇಷಗಿರಿರಾವ್
ಶಾಂತರಸ
ಕೆ. ವಿ. ಸುಬ್ಬಣ್ಣ
ಗೊ. ರು. ಚನ್ನಬಸಪ್ಪ
ಪಿ. ಎಸ್. ಶಂಕರ್
ಶಿವಶಂಕರ ಹಿರೇಮಠ
ಆರ್. ಎಸ್. ರಾಜಾರಾಮ್
ಶ್ರೀಮತಿ ಎಲ್. ಜಿ. ಸುಮಿತ್ರ

**ಸಂಪಾದಕ ಸಮಿತಿ**

*ಶ್ರೀಯುತರಾದ*
ಎಸ್. ಜಿ. ನಾಗಲೋಟಿಮಠ
ಕೆ. ವಿ. ನಾರಾಯಣ
ಪುರುಷೋತ್ತಮ ಬಿಳಿಮಲೆ
ಕರೀಗೌಡ ಬೀಚನಹಳ್ಳಿ
ಅಮೃತ ಸೋಮೇಶ್ವರ
ಸಿ. ಆರ್. ಚಂದ್ರಶೇಖರ್
ಬಿ. ಎ. ಶ್ರೀಧರ
ಲಿಂಗದೇವರು ಹಳೆಮನೆ
ಭ. ಮಲ್ಲಿಕಾರ್ಜುನ
ಮಹಾಬಲೇಶ್ವರರಾವ್
ಭಕ್ತಪ್ರಿಯ
ಎಂ. ಪಿ. ಪರಮಶೇಖರಯ್ಯ
ಶ್ರೀಮತಿ ಉಷಾ ರಾಂಕುಮಾರ್

ಲೋಕಶಿಕ್ಷಣ ನಿರ್ದೇಶನಾಲಯ
ನವಸಾಕ್ಷರ ಪುಸ್ತಕ ಮಾಲೆ-೪೭

# ಡಾ॥ ಬಿ.ಆರ್. ಅಂಬೇಡ್ಕರ್

ಎಚ್. ಎಸ್. ಶುಭದಾ



ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ-೫೮೩ ೨೧೧

DR. B. R. AMBEDKAR : By Smt. H. N. SHUBHADA. Published by The Director of Prasaranga, Kannada University, Hampi - 583 211, KARNATAKA.
First Impression 1994, Pp. [illegible] + 26, Rs. 8.00





ಸಂಯೋಜನಾಧಿಕಾರಿ
ಡಾ|| ಎಚ್. ಎಸ್. ಶ್ರೀಮತಿ
ಪಠ್ಯಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧

ಮುಖಪುಟ ವಿನ್ಯಾಸ
ಕೆ. ಮಕಾಳಿ

ಬೆಲೆ : ರೂ ೮.೦೦

ಮುದ್ರಕರು
ಪ್ರಿಂಟ್‌ಪ್ಯಾಕ್
ದೇವಯಾನಿ ಇಂಡಸ್ಟ್ರಿಯಲ್ [illegible], 28/2, ಗೌಡನಪಾಳ್ಯ,
ಸುಬ್ರಹ್ಮಣ್ಯಪುರ ರಸ್ತೆ, ಬೆಂ[illegible]೦ ೦೬೧

# ಡಾ॥ ಬಿ.ಆರ್. ಅಂಬೇಡ್ಕರ್

**ಕಥೆಗೆ ಮೊದಲು**

ಭಾರತ ನಮ್ಮೆಲ್ಲರ ದೇಶ. ಇದನ್ನು ಒಂದು ಹೂದೋಟಕ್ಕೆ ಹೋಲಿಸಬಹುದು. ತೋಟದಲ್ಲಿ ಅನೇಕ ಹೂವುಗಳು ಅರಳುತ್ತವೆ ಅಲ್ಲವೆ? ಹಾಗೆಯೇ ನಮ್ಮ ಭಾರತದಲ್ಲಿ ಬಹಳ ಜನ ಮಹಾಪುರುಷರು ಹುಟ್ಟಿದ್ದಾರೆ. ಅವರ ಜೀವನ, ಸಾಧನೆ ನಮಗೆ ದಾರಿದೀಪವಾಗಿವೆ. ಇವರಿಂದ ನಾವು ಕಲಿಯುವುದು ತುಂಬಾ ಇದೆ.

ಮಹಾಪುರುಷರೆಂದರೆ ಯಾರು? ಎಂದು ನೀವು ಕೇಳಬಹುದು. ಕೆಲವು ಮಹನೀಯರಿಂದ ನಾಡಿಗೆ ಉಪಕಾರವಾಗಿರುತ್ತದೆ. ಅವರು ಜನರ ಏಳಿಗೆಗೆ ದುಡಿದಿರುತ್ತಾರೆ. ಅವರು ತಮ್ಮ ಸ್ವಂತ ಸುಖವನ್ನೂ ಗಮನಿಸದೆ ಬೇರೆಯವರ ಹಿತಕ್ಕೆ ದುಡಿದಿರುತ್ತಾರೆ. ಅವರೇ ಮಹಾಪುರುಷರು.

ಇಂತಹ ಮಹಾಪುರುಷರ ಸಾಲಿಗೆ ಸೇರುವ ವ್ಯಕ್ತಿ ಡಾ. ಭೀಮರಾವ್ ರಾಮ್‌ಜಿ ಅಂಬೇಡ್ಕರ್ ಅವರು. ಅವರು ಭಾರತದ ಹಿಂದುಳಿದ ಜಾತಿಯ ಜನರ ನಾಯಕರಾದರು. ಸಮಾಜವನ್ನು ಬದಲಾಯಿಸಲು ದುಡಿದರು. ತುಂಬಾ ಬುದ್ಧಿವಂತರಾದ ಇವರು



ಭಾರತದಲ್ಲಿ ವರ್ಣಪದ್ಧತಿ

೧. ಬ್ರಾಹ್ಮಣ ೨. ಕ್ಷತ್ರಿಯ ೩. ವೈಶ್ಯ ೪. ಶೂದ್ರ

ವಿದೇಶಗಳಿಗೆ ತೆರಳಿದರು. ಹೆಚ್ಚಿನ ಶಿಕ್ಷಣ ಪಡೆದರು. ಅದರಿಂದ ಅವರಿಗೆ ಹೊಸ ಬಲ ಬಂದಿತು. ಅನ್ಯಾಯದ ವಿರುದ್ಧ ಹೋರಾಡಿದರು. ದಲಿತರ ಪಾಲಿನ ದೇವರಾದರು. ಲಕ್ಷಾಂತರ ಜನ ತಲೆಎತ್ತಿ ಬಾಳಲು ನೆರವಾದರು. ಮಾನವರೆಲ್ಲಾ ಒಂದೇ ಎಂದು ಸಾರಿದರು. ಮೇಲು ಕೀಳುಗಳು ಬೇಡವೆಂದರು. ಎಲ್ಲ ಜಾತಿಗಳವರೂ ಮಾನವರೆ, ಜಾತಿಯ ಕಾರಣದಿಂದ ಭೇದಭಾವ ಸಲ್ಲದು ಎಂದರು.

## ಎಲ್ಲೆಲ್ಲೂ ಕತ್ತಲು

ನಮ್ಮ ವಿಶಾಲ ದೇಶದಲ್ಲಿ ಅನೇಕ ಜಾತಿಗಳು, ಧರ್ಮಗಳು ಇವೆ. ಬಹಳ ಹಿಂದೆ, ವೇದಕಾಲದಲ್ಲಿ ಜಾತಿಪದ್ಧತಿ ಇರಲಿಲ್ಲ. ಹಿಂದೂಗಳನ್ನು ಅವರ ಕಸುಬಿನ ಆಧಾರದ ಮೇಲೆ ವಿಂಗಡಿಸಿದ್ದರು. ದೈಹಿಕ ಶ್ರಮವಿಲ್ಲದೆ, ಹೋಮ ಹವನಗಳನ್ನು ಮಾಡುವವರು ಬ್ರಾಹ್ಮಣರಾದರು. ಅದೇ ರೀತಿ ಆಳುವವರು, ದೇಶವನ್ನು ಕಾಯುವವರು ಕ್ಷತ್ರಿಯರಾದರು. ಅಧಿಕಾರ ಇವರ ಕೈಯ್ಯಲ್ಲಿತ್ತು. ಹೀಗಾಗಿ ಬ್ರಾಹ್ಮಣರೂ-ಕ್ಷತ್ರಿಯರೂ ಮೇಲುವರ್ಗದ ಜನರಾದರು. ವ್ಯಾಪಾರ ಮಾಡುವ ಜನರನ್ನು ವೈಶ್ಯರೆಂದು ಕರೆದರು. ಭೂಮಿತಾಯಿಯ ಸೇವೆಮಾಡುವ ರೈತನು ಶೂದ್ರನಾದ. ಈ ನಾಲ್ಕೂ ಜಾತಿಯವರನ್ನು ಸವರ್ಣೀಯರೆಂದು ಕರೆದರು.

ಕಾಲ ಸರಿದಂತೆ ಅಧಿಕಾರ ಹಾಗು ಸಂಪತ್ತನ್ನು ಹೊಂದಿದ್ದ ಮೇಲು ವರ್ಗದವರಾದ ಬ್ರಾಹ್ಮಣರು ಹಾಗೂ ಕ್ಷತ್ರಿಯರು ಬಲವಾದರು. ತಮ್ಮ ಅಧಿಕಾರ ಹಾಗೂ ಸಂಪತ್ತನ್ನು ಬೇರೆಯವರ ಪಾಲಾಗದಂತೆ ಉಳಿಸಿಕೊಳ್ಳುವ ಉಪಾಯ ಹೂಡಿದರು. ಹುಟ್ಟಿನಿಂದಲೇ ಜಾತಿಯ ನಿರ್ಣಯ ಆಗಲಿ ಎಂದರು. ಹೀಗಾಗಿ ಅವರಲ್ಲಿ ಶೇಖರವಾಗಿದ್ದ ಆಸ್ತಿ, ಅಧಿಕಾರಗಳು ಅವರ ಮಕ್ಕಳಿಗೇ ದೊರೆತವು. ಈಗ ಜಾತಿಗಳಲ್ಲಿ ಮೇಲು, ಕೀಳುಗಳೆಂಬ ಭಾವನೆ ಆರಂಭವಾಯಿತು. ಈ ನಾಲ್ಕು ಜಾತಿಗಳಲ್ಲದೆ, ಇನ್ನಿತರ ಕೆಲಸ ಮಾಡುವವರ ಇನ್ನೊಂದು ಜಾತಿ ಹುಟ್ಟಿತು. ಚಪ್ಪಲಿ ಹೊಲೆಯುವವರು, ಬೀದಿ ಗುಡಿಸುವವರು, ಮಡಿಕೆ ಮಾಡುವವರು, ಮೊದಲಾದವರು ಐದನೆಯ ಜಾತಿಗೆ ಸೇರಿದರು. ಅವರನ್ನು ಸವರ್ಣೀಯರು ಕೀಳಾಗಿ ಕಂಡರು. 'ಅಸ್ಪೃಶ್ಯರು' ಎಂದು ಕರೆದರು.

'ಅಸ್ಪೃಶ್ಯ' ಎಂದರೆ ಮುಟ್ಟಿಸಿಕೊಳ್ಳಬಾರದವನು ಎಂದು ಅರ್ಥ. ನಾಲ್ಕು ಜಾತಿಯ ಜನರೂ ಅವರನ್ನು ಮುಟ್ಟಿಸಿಕೊಳ್ಳುತ್ತಿರಲಿಲ್ಲ. ಇಡೀ ಹಿಂದೂ ಸಮಾಜದಲ್ಲೇ ಇವರನ್ನು ಕೆಳಜಾತಿಯವರೆಂದು, ಕರೆದರು. ಇದು ಕೇವಲ ಉತ್ತಮ ಜಾತಿಯವರ ಭಾವನೆಯಾಗಿತ್ತು. ಅವರು ಅಸ್ಪೃಶ್ಯರನ್ನು ಸಾಧ್ಯವಾದಷ್ಟೂ ಹಿಂದೆಯೇ ತಳ್ಳಿದರು! ಉತ್ತಮರು ಅಸ್ಪೃಶ್ಯರನ್ನು ನೋಡುತ್ತಲೂ ಇರಲಿಲ್ಲ. ಅವರನ್ನು ಮುಟ್ಟುವುದಂತೂ ದೂರದ ಮಾತು. ಕೆಲವರು ಅವರ ನೆರಳನ್ನೂ ನೋಡದಂತೆ ಎಚ್ಚರವಹಿಸುತ್ತಿದ್ದರು.

ಇದಲ್ಲದೆ ಅಸ್ಪೃಶ್ಯರು ಊರಿನ ಒಳಗೆ ಹೋಗುವಂತಿರಲಿಲ್ಲ. ದೇಗುಲಗಳಿಗೆ ಅವರನ್ನು ಸೇರಿಸುತ್ತಿರಲಿಲ್ಲ. ಬಾಯಾರಿಕೆಯಾದಾಗ ಬಾವಿ, ಕೆರೆಗಳನ್ನು ಮುಟ್ಟಲು ಅವಕಾಶವಿರಲಿಲ್ಲ. ಕ್ಷೌರಿಕರು ಅವರಿಗೆ ಕ್ಷೌರ ಮಾಡುತ್ತಿರಲಿಲ್ಲ. ಅಗಸರು ಇವರ ಬಟ್ಟೆಗಳನ್ನು ಒಗೆಯುತ್ತಿರಲಿಲ್ಲ. ಅವರು ಭೂಮಿಯ ಯಜಮಾನರಾಗಲು ಅವಕಾಶವಿರಲಿಲ್ಲ. ಕಾಲಿಗೆ ಚಪ್ಪಲಿ ತೊಡುವ ಹಾಗಿರಲಿಲ್ಲ.

ಅವರು ತುಂಡು ಬಟ್ಟೆಯನ್ನು ಮಾತ್ರ ಧರಿಸಬೇಕಾಗಿದ್ದಿತು. ಉತ್ತಮ ಜಾತಿಯವರು ಬಿಸಾಡಿದ ಎಂಜಲನ್ನು ತಿನ್ನಬೇಕಾಗಿತ್ತು. ಅವರ ಮನೆಗಳೋ? ಕತ್ತಲಿನಿಂದ ತುಂಬಿದ, ಕೊಳಕು ಗೂಡುಗಳಾಗಿದ್ದವು. ಹೊಂಡಗಳಲ್ಲಿ ನಿಂತ ಕೆಟ್ಟ ನೀರನ್ನು ಅವರು ಕುಡಿಯುತ್ತಿದ್ದರು. ಸತ್ತ ಪ್ರಾಣಿಗಳ ಮಾಂಸ ಅವರ ಆಹಾರವಾಗಿತ್ತು. ಸತ್ತವರಿಗೆ ಗುಂಡಿ ತೋಡುವುದು, ಊರ ಕಸಗುಡಿಸುವುದು ಹಾಗೂ ಮಲಹೊರುವುದು ಈ ಜನರ ಮುಖ್ಯ ಕಸುಬಾಗಿದ್ದಿತು. ಹೀಗೆ ಎಲ್ಲ ರೀತಿಯಲ್ಲೂ ಕಷ್ಟದ ಬದುಕು ಇವರದಾಗಿತ್ತು. ಇದಲ್ಲದೆ ಜೀತದಾಳುಗಳಾಗಿಯೂ ಅಸ್ಪೃಶ್ಯರು ದುಡಿಯುತ್ತಿದ್ದರು. ಇತರ ಜಾತಿಯವರ ಸುಖಕ್ಕಾಗಿ ಅಸ್ಪೃಶ್ಯರು ದುಡಿಯುತ್ತಿದ್ದರು.

ಈ ಕೆಟ್ಟ ಪದ್ಧತಿಗೆ ಮುಖ್ಯ ಕಾರಣರಾದವರು ಸವರ್ಣೀಯರು. ಜನರಲ್ಲಿ ಅನೇಕ ಮೂಢನಂಬಿಕೆಗಳನ್ನು ಅವರು ಬಿತ್ತಿದರು. ಮೈಲಿಗೆಯ ಬಗ್ಗೆ ಅವರು ವಿಚಿತ್ರವಾಗಿ ನಡೆದುಕೊಂಡರು. ಅಸ್ಪೃಶ್ಯರನ್ನು ನೋಡುವುದರಿಂದ, ಮುಟ್ಟುವುದರಿಂದ ಮೈಲಿಗೆಯಾಗುತ್ತದೆ. ಇದಲ್ಲದೆ ಹುಟ್ಟು, ಸಾವು, ಋತು, ಗರ್ಭಧಾರಣೆ

ಮುಂತಾದವುಗಳಿಂದ ಮೈಲಿಗೆಯಾಗುತ್ತದೆ. ಬಾಣಂತಿಯರು ಹೆತ್ತ ಹತ್ತು ದಿನಗಳವರೆಗೆ ಯಾರನ್ನೂ ಮುಟ್ಟುವಂತಿಲ್ಲ. ಸತ್ತವರ ರಕ್ತಸಂಬಂಧಿಗಳು ಹತ್ತು ದಿನ ಯಾರನ್ನೂ ಮುಟ್ಟುವಂತಿಲ್ಲ. ಮುಟ್ಟಾದವರು ಯಾರನ್ನಾದರೂ ಮುಟ್ಟಿದರೆ ಕೇಡುಂಟಾಗುತ್ತದೆ. ಬ್ರಾಹ್ಮಣರು ಇತರ ಜಾತಿಯವರನ್ನು ಮುಟ್ಟಬಾರದು. ಮಾಂಸ ತಿನ್ನುವುದರಿಂದ ಮೈಲಿಗೆಯಾಗುತ್ತದೆ. ಮೈಲಿಗೆಯಿಂದ ದೇವರು ಸಿಟ್ಟಾಗುತ್ತಾನೆ. ದೇವರ ಕೋಪ ಜನರನ್ನು ನಾಶ ಮಾಡುತ್ತದೆ. ಹೀಗೆಲ್ಲಾ ಹೇಳಿ ಜನರನ್ನು ನಂಬಿಸಿದರು.

ಈ ಮೈಲಿಗೆ ತಗುಲಿದರೆ ಪರಿಹಾರವನ್ನೂ ಅವರು ಆಚರಿಸುತ್ತಿದ್ದರು. ಸ್ನಾನ ಮಾಡುವುದು, ಬಟ್ಟೆ ಬದಲಿಸುವುದು ಮೈಲಿಗೆಯನ್ನು ಕಳೆದುಕೊಳ್ಳುವ ಸಾಧನಗಳಾಗಿದ್ದವು. ಕೆಲವು ವೇಳೆ ಗೋಮೂತ್ರ, ಸಗಣಿಗಳನ್ನೂ ಶುದ್ಧೀಕರಣಕ್ಕೆ ಬಳಸುತ್ತಿದ್ದರು. ಕೆಲವು ವೇಳೆ ಕೂದಲು ಕತ್ತರಿಸಿಕೊಳ್ಳುತ್ತಿದ್ದರು. ಹೀಗೆ ಶುದ್ಧಿಯಾದ ನಂತರ ಎಲ್ಲರೊಂದಿಗೆ ಬೆರೆಯುತ್ತಿದ್ದರು.

ಆದರೆ ಅಸ್ಪೃಶ್ಯ ಎಂದೆಂದಿಗೂ ಮೈಲಿಗೆಯೇ! ಅವನಿಗೆ ಯಾವ ಶುದ್ಧಿಯೂ ಇಲ್ಲ! ಅವನು ಜೀವನ ಪೂರ್ತಿ ಮೈಲಿಗೆಯೇ! ಹೀಗೆ ಅಸ್ಪೃಶ್ಯರ ಬಾಳು ಹೇಯವಾಗಿದ್ದಿತು.

ಅವರಿಗೆ ವಿಶ್ರಾಂತಿ, ಮನರಂಜನೆಗಳು ಇರಲಿಲ್ಲ. ಬುದ್ಧಿಯ ವಿಕಾಸಕ್ಕೆ ಮಾರ್ಗಗಳೇ ಇರಲಿಲ್ಲ. ಅವರಿಗೆ ಯಾರೂ ವಿದ್ಯೆ ಕಲಿಸುತ್ತಿರಲಿಲ್ಲ. ಪಾಠಶಾಲೆಗಳಿಗೆ ಪ್ರವೇಶವಿರಲಿಲ್ಲ. ಇದನ್ನೂ ಉತ್ತಮರು ತಡೆಹಿಡಿದಿದ್ದರು. ವಿದ್ಯೆ ಮನುಷ್ಯನಿಗೆ ದೊಡ್ಡ ಆಸ್ತಿ. ಆದ್ದರಿಂದಲೇ ಹಿರಿಯರು, ಯಾರಿಗೆ ವಿದ್ಯೆ ಇರುವುದಿಲ್ಲವೋ ಅವರು ಪಶುವಿಗಿಂತ ಕಡೆ ಎಂದಿದ್ದಾರೆ. ಅಸ್ಪೃಶ್ಯರು ವಿದ್ಯಾವಂತರಾಗಿದ್ದರೆ ಅವರು ಎಂದೋ ಸುಧಾರಿಸುತ್ತಿದ್ದರು. ಅವರ ಖಾಯಿಲೆಗಳು, ಕೊಳಕುತನ ಹಾಗೂ ಹಿಂಜರಿಕೆ ಕಡಿಮೆಯಾಗುತ್ತಿತ್ತು.


ಆದರೆ ಕಾಲ ಸರಿದಂತೆ ಬದಲಾವಣೆಗಳು ಆಗಬೇಕಲ್ಲವೆ? ಆಯಿತು. ಆದರೆ ನಿಧಾನವಾಗಿ.

ಹಿಂದಿನಿಂದಲೂ ಅಸ್ಪೃಶ್ಯರ ಬಗ್ಗೆ ಮಹನೀಯರು ಮರುಗಿದ್ದಾರೆ. ಆದರೆ ಇಂತಹ ಉದಾತ್ತ ಮನೋಭಾವದವರು ಬಹಳ ಕಡಿಮೆ. ಮುಸ್ಲಿಮರು ಹಾಗೂ ಕ್ರೈಸ್ತರನ್ನು ಸೋದರಭಾವದಿಂದ ಕಂಡರು ಹಿಂದೂಗಳು. ಆದರೆ ತಮ್ಮ ಧರ್ಮದವರೇ ಆದ ಅಸ್ಪೃಶ್ಯರನ್ನು ಕುರಿತಂತೆ ಮಾತ್ರ ಅವರ ಭಾವನೆ ಬದಲಾಗಲಿಲ್ಲ. ಅಸ್ಪೃಶ್ಯರನ್ನು ಹೊಲೆಯ ಎಂದರು.

ಈ ಸಾಮಾಜಿಕ ಕಳಂಕವನ್ನು ತೊಡೆದು ಹಾಕಲು ಅನೇಕ ಮಹನೀಯರು ಬಯಸಿದರು. ತಮ್ಮ ಜೀವಿತವನ್ನೇ ಇದಕ್ಕಾಗಿ ಮುಡಿಪಾಗಿಟ್ಟರು. ಭಗವಾನ್ ಬುದ್ಧನು ಈ ಪದ್ಧತಿಯನ್ನು ಅಳಿಸಲು ಬಯಸಿದನು. ಮಾನವ ತನ್ನ ಸಹಮಾನವರನ್ನು ಹಿಂಸಿಸುವುದನ್ನು ಖಂಡಿಸಿದನು. ಬೌದ್ಧಧರ್ಮದಲ್ಲಿ ಇವರಿಗೆಲ್ಲ ಆಶ್ರಯ ನೀಡಿದನು. ಆದರೆ ಬೌದ್ಧಧರ್ಮ ಭಾರತದಿಂದ ಬೇಗ ಮರೆಯಾಯಿತು. ಅಸ್ಪೃಶ್ಯರು ಮೊದಲಿನ ಸ್ಥಿತಿಗೇ ಮರಳಿದರು.

ನಂತರ ಶ್ರೀರಾಮಾನುಜಾಚಾರ್ಯರು ದಲಿತರನ್ನು ಕಂಡು ನೊಂದರು. ಬ್ರಾಹ್ಮಣರ ದಬ್ಬಾಳಿಕೆಯನ್ನು ಕಂಡು ಕಿಡಿಕಿಡಿಯಾದರು. ದೇವಾಲಯಗಳಿಗೆ ಅಸ್ಪೃಶ್ಯರನ್ನು ಬಿಟ್ಟರು. ಅವರ ಪ್ರಯತ್ನಗಳೇನೋ ನಡೆದವು. ಆದರೆ ಹೆಚ್ಚು ಜನ ಬ್ರಾಹ್ಮಣರು ಅದನ್ನು ವಿರೋಧಿಸಿದರು. ನಂತರ ಬಸವಣ್ಣನವರು ತಮ್ಮ ಪ್ರಯತ್ನಗಳನ್ನು ಈ ನಿಟ್ಟಿನಲ್ಲಿ ನಡೆಸಿದರು. ಮಾನವರಲ್ಲಿ ಮೇಲು-ಕೀಳುಗಳಿಲ್ಲ ಎಂದು ಸಾರಿದರು. ಜಾತಿಯು ಹುಟ್ಟಿನಿಂದಲ್ಲ, ನಡವಳಿಕೆಯಿಂದ ಬರುತ್ತದೆ ಎಂದರು. ಆದರೆ ಅವರು ನಡೆಸಿದ ಈ ಚಳುವಳಿಯ ಫಲ ಕೂಡ ಬಹಳ ದಿನವಿರಲಿಲ್ಲ.

ಇವರಲ್ಲದೆ ಕನಕದಾಸರೂ ಕೆಳಜಾತಿಯವರ ಏಳಿಗೆಗೆ ಶ್ರಮಿಸಿದರು. ದೇವರ ಕೃಪೆ ಬೇಕಾದರೆ ಜಾತಿಯ ಬಲ ಬೇಡವೆಂದರು. ಕುಲ ಕುಲ ಕುಲ ಎಂದೇಕೆ ಹೊಡೆದಾಡುವಿರಿ? ಎಂದರು.




ಮಹಾಪುರುಷರು

ಸರ್ವಜ್ಞ ಕವಿಯೂ ಈ ದಿಕ್ಕಿನಲ್ಲಿ ಜನರನ್ನು ಎಚ್ಚರಿಸಿದ. ಜಾತಿ ಪದ್ಧತಿಯನ್ನು ಖಂಡಿಸಿದ. ಜಾತಿಹೀನನ ಮನೆಯ ಜ್ಯೋತಿ ತಾ ಹೀನವೆ? ಎಂದ.

ಇದಲ್ಲದೆ ಸಂತ ಕಬೀರ್, ರಾಮಾನಂದ್, ಮೀರಾ ಮುಂತಾದವರು ಅಸ್ಪೃಶ್ಯರ ಮನೆಗಳಿಗೆ ಹೋಗಿ ಉಂಡರು. ಅವರನ್ನು ಮುಟ್ಟಿದರು. ಜನರ ಮನ ಒಲಿಸಲು ಪ್ರಯತ್ನಿಸಿದರು. ಶ್ರೀ ರಾಜಾರಾಂ ಮೋಹನ್‌ರಾಯ್, ಮಹಾತ್ಮ ಫುಲೆ ಮುಂತಾದವರು ಇದಕ್ಕೆ ನೆರವಾಗುವ ಅನೇಕ ಯೋಜನೆಗಳನ್ನು ಜಾರಿಗೆ ತರಲು ಯತ್ನಿಸಿದರು. ಜನರು ಅವರಿಗೆ ಸಹಕಾರ ನೀಡಲಿಲ್ಲ. ಅವರನ್ನು ಕಂಡು ಹಾಸ್ಯಮಾಡಿದರು. ನಕ್ಕರು. ಅವರ ಆಸೆಗೆ ನೀರೆರಚಿದರು. ಆದರೆ ಈ ಮಹನೀಯರು ಇದ್ಯಾವುದಕ್ಕೂ ಜಗ್ಗಲಿಲ್ಲ. ಅವರು ಅಸ್ಪೃಶ್ಯರಿಗಾಗಿ ಶಾಲೆಗಳನ್ನು ತೆರೆದರು. ಬ್ರಾಹ್ಮಣ ಉಪಾಧ್ಯಾಯರು ಇಲ್ಲಿ ಪಾಠ ಕಲಿಸಲು ಒಪ್ಪಲಿಲ್ಲ. ಆದರೆ ಮುಸ್ಲಿಂ ಉಪಾಧ್ಯಾಯರು ದೊಡ್ಡ ಮನಸ್ಸು ಮಾಡಿದರು. ಅಸ್ಪೃಶ್ಯರಿಗೆ ಕಲಿಸಲು ಒಪ್ಪಿದರು.

ಮಹಾತ್ಮಾ ಗಾಂಧಿಯವರೂ ಈ ನಿಟ್ಟಿನಲ್ಲಿ ಅನೇಕ ಕೆಲಸಗಳನ್ನು ಮಾಡಿದರು. ಈ ಜನರ ಉದ್ಧಾರವಾಗಬೇಕು. ಆಗಲೇ ಭಾರತದ ಉದ್ಧಾರ ಸಾಧ್ಯ ಎಂದು ಅವರು ನಂಬಿದ್ದರು. ಅಸ್ಪೃಶ್ಯರನ್ನು 'ಹರಿಜನ' ಎಂದು ಕರೆದರು. ಅವರನ್ನು ಪ್ರೀತಿಯಿಂದ ಕಂಡರು. ತಮ್ಮ ಆಶ್ರಮದಲ್ಲಿ ಅವರನ್ನು ಸೇರಿಸಿಕೊಂಡರು. ಅಷ್ಟೆಲ್ಲ ಆದರೂ ಭಾರತದಲ್ಲಿನ ಅಸ್ಪೃಶ್ಯರಿಗೆ ಒಂದು ಕೊರತೆ ಇದ್ದಿತು. ಅದೆಂದರೆ ಒಳ್ಳೆಯ ನಾಯಕನಿಲ್ಲದ್ದು. ಅವರ ಪರವಾಗಿ ವಾದಿಸಲು, ಹಕ್ಕುಗಳಿಗೆ ಹೋರಾಡಲು ಯಾರೂ ಇರಲಿಲ್ಲ. ಅವರಿಗೆ ಶಿಕ್ಷಣದ ಕೊರತೆ ಇದ್ದಿತು. ಹಣದ ಕೊರತೆ ಇದ್ದಿತು. ವಿದ್ಯೆಯು ಧೈರ್ಯವನ್ನು ನೀಡುತ್ತದೆ. ಹೋರಾಟಕ್ಕೆ ಶಕ್ತಿಯನ್ನೂ ಕೊಡುತ್ತದೆ. ವಿದ್ಯೆಯ ಅಭಾವದಿಂದ ಆತ್ಮವಿಶ್ವಾಸ ಕಮ್ಮಿಯಾಗುತ್ತದೆ. ನಾಯಕನಿಲ್ಲದ ಅಸ್ಪೃಶ್ಯರ ಗೋಳು ಹೇಳತೀರದ್ದಾಗಿದ್ದಿತು. ಅವರ ಕೈ ಹಿಡಿದು ನಡೆಸುವ ಚೇತನ ಬೇಕಾಗಿತ್ತು.

ಇಂತಹ ಒಂದು ಸಂಕಟದ ಸಮಯದಲ್ಲಿ, ದಲಿತರ ಬಾಳಿನ ಆಶಾಕಿರಣ ಮೂಡಿತು. ಮಹಾರಾಷ್ಟ್ರದ ಅಂಬೇವಾಡೆಯಲ್ಲಿ ಡಾ. ಭೀಮರಾವ್ ರಾಮ್‌ಜೀ ಅಂಬೇಡ್ಕರರ ಜನನವಾಯಿತು. 'ಮಹರ್' ಎಂಬ ಒಂದು ಕೆಳಜಾತಿಯಲ್ಲಿ ಇವರು ಹುಟ್ಟಿದರು. ಮುಂದೆ ಇವರು ದಲಿತರ ದನಿಯಾದರು.

ಅವರ ತಂದೆ ರಾಮ್‌ಜಿ ಸತ್ಪಾಲರು ಸಜ್ಜನರು. ದಯೆ, ಕರುಣೆ, ಪ್ರೀತಿ, ದೈವಭಕ್ತಿ ಅವರಲ್ಲಿ ಸಹಜವಾಗಿ ಇದ್ದಿತು. ಅವರು ಓದು-ಬರಹ ಕಲಿತಿದ್ದರು. ಸೈನಿಕಶಾಲೆಯಲ್ಲಿ ಉಪಾಧ್ಯಾಯರಾಗಿದ್ದರು. ಅವರಲ್ಲಿ ಶಿಸ್ತು-ಸಂಯಮ ಮನೆಮಾಡಿತ್ತು.

ಅವರಿಗೆ ಅನುರೂಪಳಾದ ಪತ್ನಿ ಭೀಮಾಬಾಯಿ. ಆಕೆ ಠಾಣಾ ಜಿಲ್ಲೆಯ ಹಳ್ಳಿಯವಳು. ಈ ದಂಪತಿಗಳ ಮನೆಯಲ್ಲಿ ಸದಾ ದೇವರ ಧ್ಯಾನ ಭಜನೆ ನಡೆಯುತ್ತಿತ್ತು. ಇದರಿಂದಲೇ ಅವರು ಬದುಕಿನಲ್ಲಿ ಸಮಾಧಾನವನ್ನು ಕಾಣುತ್ತಿದ್ದರು. ಹೀಗಿದ್ದ ಸುಂದರ ಕುಟುಂಬದಲ್ಲಿ ಸುಮಾರು ನೂರು ವರ್ಷಗಳ ಕೆಳಗೆ ಅಂಬೇಡ್ಕರ್ ಜನಿಸಿದರು. ಅಂಬೇಡ್ಕರರ ಜನನದೊಂದಿಗೆ ದಲಿತರ ಭಾಗ್ಯ ಉದಯಿಸಿತು.

ಅವರ ಬಾಲ್ಯ ಕಷ್ಟದಲ್ಲೇ ಕಳೆಯಿತು. ಅವರಿಗೆ ಎರಡು ವರ್ಷಗಳಾದಾಗ ತಂದೆಗೆ ನಿವೃತ್ತಿಯಾಯಿತು. ತಂದೆ ಕೆಲಸವನ್ನು ಹುಡುಕಿಕೊಂಡು ಊರೂರು ಅಲೆದರು. ಹೀಗೆಯೇ ನೆಲೆಸಲು ಸ್ಥಳವಿಲ್ಲದಿದ್ದಾಗ ಭೀಮಾಬಾಯಿ ತೀರಿಕೊಂಡರು. ಕುಟುಂಬ ಅತಿ ಕಷ್ಟದಲ್ಲಿ ದಿನಗಳನ್ನು ಕಳೆಯಬೇಕಾಯಿತು.

ಆದರೆ ರಾಮ್‌ಜೀ ಸತ್ಪಾಲರು ಈ ಪರಿಸ್ಥಿತಿಯನ್ನು ತಾಳ್ಮೆಯಿಂದ ಎದುರಿಸಿದರು. ಮಕ್ಕಳ ಪೋಷಣೆಯ ಹೊಣೆಯನ್ನು ಹೊತ್ತರು. ಮಕ್ಕಳನ್ನು ಶಾಲೆಗೆ ಸೇರಿಸಿದರು. ಪ್ರಾಮಾಣಿಕತೆಯನ್ನು ಮಕ್ಕಳಲ್ಲಿ ಬೆಳೆಸಿದರು. ಪ್ರತಿ ಸಂಜೆ ಭಜನೆಗಳನ್ನು ಕಲಿಸಿದರು. ಇಂಗ್ಲೀಷ್ ಭಾಷೆಯನ್ನು ಅವರಿಗೆ ಕಲಿಸಿದರು. ಮಕ್ಕಳಿಗೆ ಮಹಾಪುರುಷರ ಜೀವನದ ಬಗ್ಗೆ ಹೇಳಿದರು. ಆಗ ಮುಂಬಯಿಯ ಸರ್ಕಾರ ಮಹರ್ ಜನಾಂಗವನ್ನು

ಸೈನ್ಯಕ್ಕೆ ಸೇರಿಸಿಕೊಳ್ಳುವುದಿಲ್ಲ ಎಂಬ ಆಜ್ಞೆಯನ್ನು ಹೊರಡಿಸಿತು. ಆದರ ವಿರುದ್ಧ ರಾಮ್‌ಜಿ ದಿಟ್ಟವಾಗಿ ಹೋರಾಡಿದರು. ಗೆಲುವು ಪಡೆದರು. ಹೀಗೆ, ಅನ್ಯಾಯದ ವಿರುದ್ಧ ಹೋರಾಡುವ ಗುಣ ಅಂಬೇಡ್ಕರರಿಗೆ ತಂದೆಯಿಂದಲೇ ಬಂದಿತೆನ್ನಬಹುದು. ತಂದೆಯ ಜೀವನ ಹಾಗೂ ಶಿಸ್ತು ಮಗನಿಗೆ ದಾರಿದೀಪವಾಯಿತು.


## ಬಾಲ್ಯದ ಅನುಭವಗಳು

ಬೇರೆ ಮಕ್ಕಳ ಬಾಲ್ಯದಂತೆ ಅಂಬೇಡ್ಕರರ ಬಾಲ್ಯ ಇರಲಿಲ್ಲ. ಜಾತಿಯ ಕಾರಣದಿಂದ ಅವರಿಗೆ ಅನೇಕ ಕಹಿ ಅನುಭವಗಳಾಗುತ್ತಿದ್ದವು. ಶಾಲೆಯಲ್ಲಿ ಮಾಸ್ತರುಗಳು ಅವರ ಸ್ಲೇಟು, ಪುಸ್ತಕಗಳನ್ನು ಮುಟ್ಟುತ್ತಿರಲಿಲ್ಲ. ಬೇರೆ ಮಕ್ಕಳಿಂದ ದೂರ, ಮೂಲೆಯಲ್ಲಿ ಇವರು ಕೂರಬೇಕಾಗಿತ್ತು. ಉತ್ತಮರ ಮಕ್ಕಳು ದೂರದಿಂದ ಹಾಕಿದ ನೀರನ್ನು ಇವರು ಕುಡಿದರು. ಒಳ್ಳೆಯ ವಿದ್ಯಾರ್ಥಿಯಾದರೂ ಯಾರೂ ಇವರನ್ನು ಹೊಗಳಲಿಲ್ಲ. ಜನರ ಮೂದಲಿಕೆಗಳು ಕಠಿಣವಾಗಿರುತ್ತಿದ್ದವು. ಇವು ಬಾಲಕ ಅಂಬೇಡ್ಕರರ ಮನಸ್ಸನ್ನು ಕದಡುತ್ತಿದ್ದವು.

ಒಮ್ಮೆ ಇವರ ಜಾತಿಯನ್ನು ತಿಳಿಯದೆ, ಒಬ್ಬ ಕುದುರೆ ಗಾಡಿಯವನು ಅವರನ್ನು ಹತ್ತಿಸಿಕೊಂಡ. ಆದರೆ ರಸ್ತೆಯಲ್ಲಿ ವಿಷಯ ತಿಳಿದು ಗಾಬರಿಯಾದ. ಅವರ ಸಾಮಾನುಗಳನ್ನು ಎಸೆದು, ಅವರನ್ನು ಕೆಳಗೆ ಇಳಿಸಿದ.

ಬಾಲಕ ಅಂಬೇಡ್ಕರ್ ಕ್ಷೌರಿಕನ ಬಳಿಗೆ ಹೋದರು. ಕ್ಷೌರಿಕನು ಕ್ಷೌರಮಾಡಲು ನಿರಾಕರಿಸಿದ. ದುಃಖದಿಂದ ಅಂಬೇಡ್ಕರ್ ಮನೆಗೆ ಬಂದರು. ಅವರನ್ನು ಅಕ್ಕಂದಿರು ಸಮಾಧಾನ ಮಾಡಿದರು. ಕೂದಲನ್ನು ತಾವೇ ಕತ್ತರಿಸಿದರು. ಕುಡಿಯಲು ನೀರನ್ನೂ ಉತ್ತಮರು ಅವರಿಗೆ ಕೊಡುತ್ತಿರಲಿಲ್ಲ. ನಿನಗೆ ಹೊಂಡದ ನೀರೇ ಸಾಕು ಎನ್ನುತ್ತಿದ್ದರು.

ಒಬ್ಬ ಗುರುಗಳು ಅವರನ್ನು ಬೋರ್ಡಿನ ಮೇಲೆ ಲೆಕ್ಕ ಮಾಡಲು ಕರೆದರು. ಆಗ ಇತರ ಸಹಪಾಠಿಗಳು ಓಡಿದರು! ಇದಕ್ಕೆ ಕಾರಣ ಬಲ್ಲಿರಾ? ಅವರೆಲ್ಲರೂ ಬೋರ್ಡಿನ



ಅಂಬೇಡ್ಕರ್ ಅವರನ್ನು ಗಾಡಿಯಿಂದ ಹೊರನೂಕಿದ್ದು

ಹಿಂದೆ ತಮ್ಮ ಊಟದ ಡಬ್ಬಿಗಳನ್ನು ಇಟ್ಟಿದ್ದರು. ಈ ಅಸ್ಪೃಶ್ಯನು ಬೋರ್ಡ್ ಮುಟ್ಟಿದರೆ ತಮ್ಮ ಊಟ ಮೈಲಿಗೆಯಾಗುವುದೆಂದು ಅವರು ತಿಳಿದಿದ್ದರು.

ಹೀಗೆ ಜನರ ವರ್ತನೆ, ಅಂಬೇಡ್ಕರರನ್ನು ನೋಯಿಸಿದವು. ಮಾನವನಾದ ನಾನು ಅಷ್ಟು ಕೀಳೆ? ನಾಯಿ-ನರಿಗಳನ್ನೂ ಮುಟ್ಟುವ ಜನರು ನನ್ನನ್ನು ಏಕೆ ಮುಟ್ಟುವುದಿಲ್ಲ? ಕ್ಷೌರಿಕನು ತುಂಬಾ ಕೊಳಕಾದ ಕೂದಲನ್ನೂ ಕತ್ತರಿಸುತ್ತಾನೆ. ಆದರೆ ನನ್ನ ಶುಭ್ರವಾದ ಕೂದಲನ್ನು ಏಕೆ ಕತ್ತರಿಸುವುದಿಲ್ಲ? ಎಲ್ಲಾ ಪ್ರಾಣಿ, ಪಕ್ಷಿಗಳೂ ಕೆರೆಯ ನೀರನ್ನು ಕುಡಿಯಬಹುದು. ಆದರೆ ನಾನು ಕುಡಿಯಬಾರದೇ? ಇದಕ್ಕೆ ಏನು ಪರಿಹಾರ? ನಾನು ಅಷ್ಟು ಕೀಳೆ? ಎಂದು ಅವರು ಚಿಂತಿಸಿದರು.

ಕಾಯಿಸಿದಷ್ಟೂ ಚಿನ್ನ ಶುದ್ಧವಾಗುವಂತೆ, ಕಷ್ಟಗಳಿಂದ ಅವರು ಗಟ್ಟಿಯಾದರು. ಸಮಾಜವನ್ನು ಎದುರಿಸುವ ಛಲ ಅವರಲ್ಲಿ ಬೆಳೆಯಿತು. ತಮ್ಮ ಜನರಿಗಾಗಿ ಹೋರಾಡಬೇಕೆಂಬ ಕನಸು ಮೂಡಿತು, ಬಲಿಯಿತು.

## ಸಾಧನೆಯ ಹಾದಿಯಲ್ಲಿ

ಹೀಗಿರುವಾಗ ಅಂಬೇಡ್ಕರರ ತಂದೆ ಇನ್ನೊಂದು ಮದುವೆಯಾದರು. ಇದು ಅಂಬೇಡ್ಕರರಿಗೆ ಬಿದ್ದ ದೊಡ್ಡ ಪೆಟ್ಟಾಯಿತು. ಓದಿನಲ್ಲಿ ಅವರ ಆಸಕ್ತಿ ಕಡಿಮೆಯಾಯಿತು. ಅವರ ಎಳೆಯ ಮನಸ್ಸು ದುಃಖಗಳನ್ನು ಸಹಿಸಿ ಸೋತಿತ್ತು. ಶಾಲೆಗೆ ಹೋಗುವುದನ್ನು



ಮುಂಬಯಿ ವಾಸ

ಬಿಟ್ಟರು. ಆಡು ಕಾದರು. ಕೂಲಿ ಕೆಲಸವನ್ನೂ ಮಾಡಿದರು. ನೌಕರಿಗೆ ಸೇರಲು ನಿರ್ಧರಿಸಿದರು. ದೂರದೂರಿಗೆ ಹೋಗಲು ಬಯಸಿದರು. ಆದರೆ ಹೋಗಲು ಅವರ ಬಳಿ ಹಣವಿರಲಿಲ್ಲ. ಕಡೆಗೆ ಸೋದರತ್ತೆಯ ಹಣದ ಚೀಲವನ್ನು ಕದ್ದರು. ಅದನ್ನು ಬಿಚ್ಚಿ ನೋಡಿದಾಗ ಕೇವಲ ಅರ್ಧಾಣೆ ಇದ್ದಿತು. ಆಗ ಅವರಿಗೆ ಹೊಸ ಸತ್ಯ ಕಾಣಿಸಿತು. ಮನೆಯ ಪರಿಸ್ಥಿತಿ ತಿಳಿಯಿತು. ತಾವು ಉದ್ಧಾರವಾಗಬೇಕಾದರೆ ವಿದ್ಯೆಯನ್ನು ಕಲಿಯಬೇಕು ಎಂಬುದನ್ನು ಅರಿತರು. ಹಣಕಾಸು ಸಂಪಾದಿಸಲು ಕೂಲಿ ಕೆಲಸದಿಂದಷ್ಟೇ ಸಾಧ್ಯವಿಲ್ಲ ಎಂದು ತಿಳಿದರು. ಅಂದಿನಿಂದ ಅವರ ಜೀವನ ಹೊಸ ಹಾದಿಯಲ್ಲಿ ಸಾಗಿತು. ಓದು ಅವರ ಉಸಿರಾಯಿತು, ತಪಸ್ಸಾಯಿತು, ಗುರಿಯಾಯಿತು. ಅದನ್ನು ಕಂಡು ಗುರುಗಳು ಹಾಗೂ ತಂದೆ ಬೆರಗಾದರು, ಕಠಿಣವಾದ ದೇಹಶ್ರಮ ಅಂಬೇಡ್ಕರರದಾಯಿತು. ಮಗನ ಆಸೆಯನ್ನು ತಂದೆ ಅರಿತರು. ಅವರಿಗಾಗಿ ತಂದೆ ಮುಂಬಯಿಗೆ ಬಂದು ನೆಲಸಿದರು.



ಆ ವೇಳೆಗೆ ಮನೆಯ ಹಣಕಾಸಿನ ಪರಿಸ್ಥಿತಿ ತುಂಬಾ ಕೆಟ್ಟಿತ್ತು. ಅವರಿದ್ದುದು ಬಹಳ ಚಿಕ್ಕ ಮನೆಯೊಂದರಲ್ಲಿ. ಮೇಲಾಗಿ ಸುತ್ತಲೂ ಕಾರ್ಮಿಕರ ಮನೆಗಳು. ಸದಾ ಗಲಾಟೆ, ಜನಗಳು. ಅದನ್ನು ಅಂಬೇಡ್ಕರರು ಲೆಕ್ಕಿಸಲಿಲ್ಲ. ರಾತ್ರಿ-ಹಗಲು ಓದುವುದೇ ಅವರ ಕೆಲಸವಾಯಿತು. ತಂದೆ ಅವರ ಓದುವ ಆಸೆಯನ್ನು ಮೆಚ್ಚಿದರು. ತಮ್ಮ ಬಳಿಯಿದ್ದ ಪಾತ್ರೆಗಳನ್ನು ಮಾರಿದರು. ಮಗನಿಗೆ ಪುಸ್ತಕಗಳನ್ನು ಕೊಂಡುಕೊಟ್ಟರು. ಮಗನ ಓದಿಗಾಗಿ ಅವರು ಸಾಲ ಮಾಡಬೇಕಾಯಿತು. ಚಿಕ್ಕ ಮನೆಯಲ್ಲಿ ಭೀಮ್‌ಜೀ ತಪಸ್ಸು ಮಾಡಿದಂತೆ ಓದುತ್ತಿದ್ದರು. ಆ ಶಾಲೆಯಲ್ಲೂ ಅಂಬೇಡ್ಕರರಿಗೆ ಕಿರುಕುಳ ಜಾಸ್ತಿಯಾಯಿತು. ಮುಂಬಯಿ ದೊಡ್ಡ ಪಟ್ಟಣ. ಆದರೂ ಅಲ್ಲಿಯೂ ಜಾತಿಯ ಭೂತ ಅವರನ್ನು ಬಿಡಲಿಲ್ಲ. ಗುರುಗಳ ಸಿಟ್ಟು ಅಂಬೇಡ್ಕರರ ಮೇಲಿತ್ತು. ಅಂಬೇಡ್ಕರರು ಸಂಸ್ಕೃತವನ್ನು ಓದಲು ಇಷ್ಟಪಟ್ಟರು. ಆದರೆ ಅದಕ್ಕೆ ಅವಕಾಶ ದೊರೆಯಲಿಲ್ಲ. ಆದರೆ ಅವರು ಇಟ್ಟ ಹೆಜ್ಜೆ ಹಿಂತೆಗೆಯಲಿಲ್ಲ.

ಸುಮಾರು ಹದಿನಾರು ವರ್ಷಗಳಾದಾಗ ಮೆಟ್ರಿಕ್ ಪಾಸುಮಾಡಿದರು. ಆಗಿನ ಕಾಲದಲ್ಲಿ ಮಹರ್ ಜಾತಿಯ ಹುಡುಗ ಮಾಡಿದ ದೊಡ್ಡ ಸಾಧನೆ ಅದು. ಹಿಂದುಳಿದ ಜಾತಿಯವರಾದ ಅಂಬೇಡ್ಕರ್ ಕಷ್ಟಗಳ ನಡುವೆ ಇದನ್ನು ಸಾಧಿಸಿದ ಜಾಣ ಎನಿಸಿದರು. ಅವರ ತಂದೆಯ ಸಂತೋಷ ಹೇಳಲು ಸಾಧ್ಯವಿಲ್ಲ. ಅವರ ಶ್ರಮ ಫಲಿಸಿತ್ತು.

ಅಂಬೇಡ್ಕರರು ಕಾಲೇಜು ಸೇರಲು ಬಯಸಿದರು. ಅವರ ತಂದೆಯ ಆರೋಗ್ಯ ಕೆಟ್ಟಿತ್ತು. ಮುಂದೆ ಹೇಗೋ ಎಂದು ಯೋಚಿಸಿದರು. ಹದಿನೇಳು ವರ್ಷದ ಮಗನಿಗೆ, ಒಂಭತ್ತು ವರ್ಷದ ಒಂದು ಹುಡುಗಿಯನ್ನು ತಂದು ಮದುವೆ ಮಾಡಿದರು. ಹೆಣ್ಣು, ಗಂಡು ಇಬ್ಬರೂ ಬಡವರು. ಹೀಗಾಗಿ ಮದುವೆ ಆಡಂಬರವಿಲ್ಲದೆ ನಡೆಯಿತು. ವಿವಾಹದಿಂದ ಅಂಬೇಡ್ಕರರ ಸಾಧನೆಗೆ ತೊಂದರೆಯಾಗಲಿಲ್ಲ. ಬದಲಾಗಿ ಅವರಿಗೆ ಸ್ಫೂರ್ತಿ ಒದಗಿತು. ಅವರು ಕಾಲೇಜಿಗೆ ಸೇರಿ ಇಂಟರ್ ಮುಗಿಸಿದರು. ಮುಂದೆ ಓದಬೇಕೆಂಬ ಆಸೆ ಹೆಚ್ಚಿತು. ಆದರೆ ಅವರ ಬಳಿ ಹಣವಿರಲಿಲ್ಲ. ಅಸಹಾಯಕರಾಗಿ ಅಂಬೇಡ್ಕರ್ ನೊಂದರು. ಆಗ ಮರಾಠಿ ಸಾಹಿತಿಯೊಬ್ಬರು ಅವರಿಗೆ ಸಹಾಯಮಾಡಿದರು. ಅವರ ಪರಿಚಯದಿಂದ ಅಂಬೇಡ್ಕರರು ವಿದ್ಯೆ ಕಲಿಯಲು ಅವಕಾಶವಾಯಿತು.

ಬರೋಡೆಯ ಮಹಾರಾಜರು ಅಸ್ಪೃಶ್ಯ ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತಿದ್ದರು. ಅವರಿಂದ ಅಂಬೇಡ್ಕರರಿಗೆ ಧನಸಹಾಯ ದೊರೆಯಿತು. ತಿಂಗಳಿಗೆ ಇಪ್ಪತ್ತೈದು ರೂಪಾಯಿಗಳ ನಿಧಿ ಅವರಿಗೆ ದೊರೆಯಿತು. ಈ ಸಹಾಯ ಅವರಿಗೆ



ಅಂಬೇಡ್ಕರ್ ಅವರಿಗೆ ಚಿಕ್ಕವಯಸ್ಸಿನಲ್ಲಿಯೇ ಮದುವೆ ಮಾಡಿದರು

ವರವಾಯಿತು. ಪಂಡಿತರೊಬ್ಬರ ಸಹಾಯದಿಂದ ಅವರು ಸಂಸ್ಕೃತ ಕಲಿತರು. ಆಳವಾದ ಓದಿನಲ್ಲಿ ತೊಡಗಿದರು. ಊಟ, ತಿಂಡಿಗಳನ್ನು ಬಿಟ್ಟು ಓದಿನಲ್ಲಿ ಮುಳುಗಿದರು. ವೇದ,



ಬರೋಡದ ಮಹಾರಾಜರು ವಿದೇಶಕ್ಕೆ ಹೋಗಿ ಬರಲು ನೆರವಾದರು

ಪುರಾಣ, ಮನುಸ್ಮೃತಿ ಓದಿದರು. ಹಿಂದೂ ಧರ್ಮದ ಬಗ್ಗೆ ತಿಳಿದುಕೊಂಡರು. ಜನರ ಹುಚ್ಚುತನವನ್ನು ಕಂಡು ಚಿಂತಿಸಿದರು.

ಅವರಿಗೆ ಇಪ್ಪತ್ತೇಳು ವರ್ಷಗಳಾದಾಗ ಬಿ.ಎ. ಪರೀಕ್ಷೆ ಪಾಸುಮಾಡಿದರು. ಬರೋಡೆಯ ಮಹಾರಾಜರು ತಮ್ಮ ಸೈನ್ಯದಲ್ಲಿ ದೊಡ್ಡ ಹುದ್ದೆಯನ್ನು ನೀಡಿದರು. ತಂದೆಗೆ ಹೊರೆಯಾಗಬಾರದೆಂದು ಅಂಬೇಡ್ಕರರು ಕೆಲಸಕ್ಕೆ ಸೇರಿದರು. ಅವರಿಗೆ ಉತ್ತಮರಿಂದ ಕಿರುಕುಳ ತಪ್ಪಲಿಲ್ಲ. ಇದೇ ವೇಳೆಗೆ ಅವರ ತಂದೆ ತೀರಿಕೊಂಡರು.

ಇದೇ ವೇಳೆಗೆ ಮಹಾರಾಜರು ನೀಡಿದ ಸಹಾಯದಿಂದ ಅವರ ಬಾಳೇ ಬೇರೆಯಾಯಿತು. ಅವರನ್ನು ವಿದೇಶಕ್ಕೆ ಕಳಿಸಲು ಮಹಾರಾಜರು ಒಪ್ಪಿದರು. ಅಲ್ಲಿಂದ ಬಂದ ಮೇಲೆ ಮಹಾರಾಜರ ಬಳಿ ಕೆಲಸ ಮಾಡಬೇಕೆಂಬ ಕರಾರು ಇದ್ದಿತು. ಹೆಚ್ಚಿನ ವಿದ್ಯೆ ಕಲಿಯಲು ಅಂಬೇಡ್ಕರರು ಕಾತರರಾಗಿದ್ದರು. ಕರಾರಿಗೆ ಒಪ್ಪಿದರು. ತಮ್ಮ ಪತ್ನಿಯನ್ನು ಅಣ್ಣನ ಮನೆಯಲ್ಲಿ ಬಿಟ್ಟರು. ಅಮೇರಿಕೆಗೆ ಹೋದರು. ಅವರ ಕನಸು ನಿಜವಾಯಿತು. ಅಂದಿನ ದಿನಗಳಲ್ಲಿ ಅಸ್ಪೃಶ್ಯನೊಬ್ಬ ವಿದೇಶಕ್ಕೆ ಓದಲು ಹೋಗುವುದು ಪವಾಡವೇ ಆಗಿದ್ದಿತು. ವಿದೇಶದಲ್ಲಿ ಅವರು ಹೊಸ ಮನುಷ್ಯರಾದರು. ಅವರಿಗೆ ಪೂರ್ಣ ಸ್ವಾತಂತ್ರವಿದ್ದಿತು. ಜಾತಿ ಅವರಿಗೆ ಅಲ್ಲಿ ತೊಂದರೆಯಾಗಲಿಲ್ಲ. ಎಲ್ಲರೊಡನೆ ಸಮಾನವಾಗಿ ಅವರು ಬೆರೆತರು. ಅವರಲ್ಲಿ ಆತ್ಮವಿಶ್ವಾಸ ಹೆಚ್ಚಿತು. ಅಲ್ಲಿನ ಜನ ಜೀವನವನ್ನು ಕಂಡು ಅವರು ಬೆರಗಾದರು.

ಭಾರತದ ಜನಜೀವನ ಬದಲಾಗಬೇಕಾದರೆ ವಿದ್ಯೆಯಿಂದ ಮಾತ್ರ ಸಾಧ್ಯ ಎಂಬುದನ್ನು ಮನಗಂಡರು. ಅಲ್ಲಿ ಅವರಿಗೆ ಅನೇಕರ ಪರಿಚಯವಾಯಿತು. ಅದರಲ್ಲಿ ಭಾರತದವರೇ ಆದ ನವಲ್ ಭತೇನ ಪ್ರಮುಖರು. ಅಂಬೇಡ್ಕರರು ಹಗಲು-ರಾತ್ರಿಗಳ ಪರಿವೆ ಇಲ್ಲದೆ ಓದಿನಲ್ಲಿ ಮಗ್ನರಾದರು. ವಿಜ್ಞಾನ, ಸಮಾಜಶಾಸ್ತ್ರ, ಅರ್ಥಶಾಸ್ತ್ರ ಮತ್ತು ರಾಜ್ಯಶಾಸ್ತ್ರಗಳನ್ನು ಅವರು ಕಲಿತರು. ಅವರು ತಮ್ಮ ಮೂವತ್ತೆರಡನೆಯ ವಯಸ್ಸಿನಲ್ಲಿ ಎಂ.ಎ. ಪದವಿಯನ್ನು ಪಡೆದರು. "ಪುರಾತನ ಭಾರತದ ವಾಣಿಜ್ಯ"ವನ್ನು ಕುರಿತಂತೆ ವಿಶೇಷ ಲೇಖನ ಬರೆದರು. ನಂತರ ಅವರು "ಭಾರತದ ಹಣಕಾಸು" ಎಂಬ ವಿಷಯದ ಬಗ್ಗೆ ಪ್ರಬಂಧ ಬರೆದರು. ಪಿಎಚ್.ಡಿ. ಪದವಿ ದೊರೆಯಿತು. ವಿಜಯದ ಬಾಗಿಲು ತೆರೆಯಿತು. ಅವರು ಭಾರತದಲ್ಲಿದ್ದ ಜೀತಪದ್ಧತಿಯನ್ನು ಕುರಿತು ಒಂದು ಭಾಷಣ ಮಾಡಿದರು. ಇದು ಅನೇಕ ವಿದೇಶೀಯರ ಮೆಚ್ಚುಗೆ ಗಳಿಸಿತು. ಹೀಗೆ ಭಾರತದಲ್ಲಿ ಜನ ಕೇವಲವಾಗಿ ಭಾವಿಸಿದ್ದ ಅಂಬೇಡ್ಕರ್, ವಿದೇಶದಲ್ಲಿ ಜಯಭೇರಿ ಬಾರಿಸಿದರು.

ಹೀಗಿರುವಾಗ ಅವರ ಮೊದಲ ಮಗ ತೀರಿಕೊಂಡನೆಂದು ಒಂದು ಪತ್ರ ಬಂತು. ಅವರ ದುಃಖ ಮೇರೆ ಮೀರಿತು. ಮಡದಿಯ ಅಸಹಾಯಕ ಸ್ಥಿತಿಯನ್ನು ನೆನೆದು ಕಣ್ಣೀರಿಟ್ಟರು. ಮನಸ್ಸನ್ನು ಹತೋಟಿಗೆ ತಂದುಕೊಂಡರು. ಲಂಡನ್ನಿನಲ್ಲಿ ತಮ್ಮ ವಿದ್ಯಾಭ್ಯಾಸ ಮುಂದುವರೆಸಲು ಬಯಸಿದರು. ಆದರೆ ಆ ವೇಳೆಗೆ ಅವರ ವಿದ್ಯಾರ್ಥಿವೇತನದ ಅವಧಿ ಮುಗಿದಿತ್ತು. ಒಲ್ಲದ ಮನಸ್ಸಿನಿಂದ ಅವರು ಭಾರತಕ್ಕೆ ಮರಳಿ ಬಂದರು.

## ಸಮಾಜದೊಡನೆ ಮುಖಾಮುಖಿ

ಅವರು ಭಾರತಕ್ಕೆ ಬಂದಾಗ ಡಾ. ಭೀಮರಾವ್ ರಾಮ್‌ಜಿ ಅಂಬೇಡ್ಕರರಾಗಿದ್ದರು. ಅಸ್ಪೃಶ್ಯರೂ ಬುದ್ಧಿವಂತರೆಂದು ಜಗತ್ತಿಗೇ ತೋರಿಸಿದ್ದರು.

ಅವರು ಹಿಂದೆ ಮಾಡಿಕೊಂಡ ಒಪ್ಪಂದದಂತೆ ಬರೋಡೆಗೆ ಕೆಲಸಕ್ಕೆ ಹೋದರು. ಅವರನ್ನು ಸ್ವಾಗತಿಸಲು ನಿಲ್ದಾಣಕ್ಕೆ ಯಾರೂ ಬರಲಿಲ್ಲ! ಅಸ್ಪೃಶ್ಯನೆಂಬ ಹಣೆಪಟ್ಟಿ ಅವರನ್ನು ಅಲ್ಲೂ ಬಿಡಲಿಲ್ಲ. ಅವರಿಗೆ ಮಹಾರಾಜರ ರಕ್ಷೆಏನೋ ಇದ್ದಿತು. ಆದರೂ ಅಧಿಕಾರಿಗಳಿಂದ ಹಿಂಸೆ ತಪ್ಪಲಿಲ್ಲ. ಜವಾನರೂ ಅವರೊಡನೆ ಮಾತನಾಡುತ್ತಿರಲಿಲ್ಲ. ಅವರೊಡನೆ ಕಾಫಿ, ಟೀ ಕುಡಿಯುವುದಂತೂ ದೂರದ ಮಾತು. ವಿದೇಶದಲ್ಲಿ ಅವರು ಮರೆತಿದ್ದ ಸಮಸ್ಯೆಗಳೂ ಮತ್ತೆ ಎದುರಾದವು. ಅವರಿಗೆ ಉಳಿಯಲು ಎಲ್ಲೂ ಜಾಗ ಸಿಕ್ಕಲಿಲ್ಲ. ಅವರು ತಂಗಿದ್ದ ಪಾರ್ಸಿ ಛತ್ರದಲ್ಲಿ ದೊಡ್ಡ ಗಲಾಟೆಯೇ ಆಯಿತು. ಅವರು ಮರದ ನೆರಳಲ್ಲಿ ಉಳಿಯಬೇಕಾಯಿತು.

ಹೀಗಾಗಿ ವಿಧಿಯಿಲ್ಲದೆ ಅವರು ಮುಂಬಯಿಗೆ ಮರಳಿದರು. ಜನ ಜಾಗೃತಿಗಾಗಿ 'ಮೂಕನಾಯಕ' ಎಂಬ ಪತ್ರಿಕೆ ಆರಂಭಿಸಿದರು. ಇದು ದಲಿತರ ದನಿಯಾಯಿತು. ಪತ್ರಿಕೆ ದಲಿತರ ಅಭಿಪ್ರಾಯಗಳನ್ನು ಜನತೆಯ ಮುಂದಿಡಲು ಸಹಕಾರಿಯಾಯಿತು. ಕೆಲಸ ಬಿಟ್ಟಿದ್ದರಿಂದ ಅಂಬೇಡ್ಕರರ ಬಳಿ ಹಣವಿರಲಿಲ್ಲ. ಜೀವನೋಪಾಯಕ್ಕಾಗಿ ಚಿಕ್ಕ ಚಿಕ್ಕ ಕೆಲಸ



ಕಷ್ಟದ ದಿನಗಳು – ಮರದ ಕೆಳಗೆ ವಾಸ

ಮಾಡಿದರು. ಮಕ್ಕಳಿಗೆ ಪಾಠ ಹೇಳಿದರು! ಷೇರು ದಲ್ಲಾಳಿ ಸಂಸ್ಥೆಯನ್ನು ತೆರೆದರು! ಆದರೆ ಅವುಗಳು ತುಂಬಾ ದಿನ ನಡೆಯಲಿಲ್ಲ. ಏಕೆ ಗೊತ್ತೆ? ಅವರು ಅಸ್ಪೃಶ್ಯರೆಂಬ ಕಾರಣದಿಂದ!

ಕೊನೆಗೊಮ್ಮೆ ಅವರಿಗೆ ಬಾಂಬೆಯ ಕಾಲೇಜಿನಲ್ಲಿ ಪ್ರಾಧ್ಯಾಪಕ ಹುದ್ದೆ ದೊರೆಯಿತು. ಮೊದಲಿಗೆ ವಿದ್ಯಾರ್ಥಿಗಳು ಅವರ ಹೆಸರನ್ನು ಕೇಳಿ ಬೇಸರಿಸಿದರು. ಆದರೆ ಅವರ ಪಾಠಗಳನ್ನು ಕೇಳಿದರು. ಅವರ ಅಭಿಪ್ರಾಯ ಬದಲಾಯಿತು. ಅಂಬೇಡ್ಕರರ ತರಗತಿಗೆ ಅತಿಹೆಚ್ಚು ವಿದ್ಯಾರ್ಥಿಗಳು ಬರಲಾರಂಭಿಸಿದರು. ಆದರೂ ಅವರ ಮನಸ್ಸಿಗೆ ನೆಮ್ಮದಿ ಇರಲಿಲ್ಲ. ತಮ್ಮ ಸ್ಥಿತಿಯೇನೋ ಸುಧಾರಿಸಿದೆ. ಆದರೆ ಇತರ ಅಸ್ಪೃಶ್ಯ ಬಾಂಧವರ ಗತಿಯೇನು? ಎನ್ನುವುದೇ ಅವರ ಚಿಂತೆಯಾಯಿತು. ಮೂಕನಾಯಕದಲ್ಲಿ ಅವರು ಬರೆದ ಲೇಖನಗಳು ಜನರನ್ನು ಎಚ್ಚರಿಸಿದವು. ಜಾತೀಯತೆಯ ಬಗ್ಗೆ, ಸ್ವಾತಂತ್ರ್ಯದ ಬಗ್ಗೆ ಅವರ ಲೇಖನಗಳು ಅಪೂರ್ವವಾಗಿದ್ದುವು. ಜನರನ್ನು ಸಂಘಟಿಸುವ, ಅವರನ್ನು ತಿದ್ದುವ ಕೆಲಸದಲ್ಲಿ ಅಂಬೇಡ್ಕರ್ ಮುಳುಗಿದರು. ಆ ಜನರು ಸಹ ಅಂಬೇಡ್ಕರರಲ್ಲಿ ತಮ್ಮ ನಾಯಕನನ್ನು ಕಂಡುಕೊಂಡರು.

ಅಂಬೇಡ್ಕರರು ಸರಳ ಜೀವನ ನಡೆಸಿದರು. ಸಂಬಳದ ಹಣವನ್ನು ಮಿತವಾಗಿ ಬಳಸಿದರು. ಹಣ ಉಳಿಸಿದರು. ಏಕೆಂದರೆ ಲಂಡನ್ನಿಗೆ ಹೋಗಿ ಹೆಚ್ಚಿನ ವಿದ್ಯೆ ಪಡೆಯುವ ಆಸೆ ಇನ್ನೂ ಅವರಲ್ಲಿತ್ತು. ಹಣ ಸಾಲದಾಯಿತು. ಆಗ ತಮ್ಮ ಸ್ನೇಹಿತರಾದ ನವಲ್‌ಭತೇನರಿಂದ ಹಣ ಪಡೆದರು. ಸಾಹು ಮಹಾರಾಜರೂ ಸಹಾಯ ಮಾಡಿದರು. ಹೀಗೆ ಸತತ ಪ್ರಯತ್ನದಿಂದ ಅಂಬೇಡ್ಕರ್ ಅವರು ಎರಡನೆಯ ಬಾರಿ ವಿದೇಶಕ್ಕೆ ತೆರಳಿದರು. ಅಲ್ಲಿ ಈ ಬಾರಿ ನ್ಯಾಯಶಾಸ್ತ್ರವನ್ನು, ಅರ್ಥಶಾಸ್ತ್ರವನ್ನು ಓದಿದರು. ವಿನೋದ, ಪ್ರವಾಸಗಳು ಅವರಿಗೆ ಬೇಕಾಗಿರಲಿಲ್ಲ. ಓದು, ಚಿಂತನ, ಮನನ, ಅವರ ಕೆಲಸವಾಯಿತು.

ಒಂದು ನಿಮಿಷವನ್ನೂ ಅವರು ಹಾಳುಮಾಡದೆ ತಮ್ಮ ಗುರಿ ಮುಟ್ಟಿದರು. "ರೂಪಾಯಿಯ ಸಮಸ್ಯೆ" ಯನ್ನು ಕುರಿತು ಲೇಖನವನ್ನು ಅವರು ಬರೆದರು. ಪದವಿ ದೊರೆಯಿತು. ವಿದೇಶದಲ್ಲಿದ್ದರೂ ಭಾರತದ ದಲಿತರಿಗಾಗಿ ಮರುಗುತ್ತಿದ್ದರು. ಅಸ್ಪೃಶ್ಯರೆಲ್ಲ ಒಂದಾಗಬೇಕೆಂದು ಕರೆ ಇತ್ತರು. ಅವರ ಏಳಿಗೆಗಾಗಿ ಯೋಜನೆಗಳನ್ನು

ತಯಾರುಮಾಡಿದರು. ಭಾರತಕ್ಕೆ ವಾಪಸಾದರು. ನ್ಯಾಯವಾದಿಗಳಾಗಿ ಹೊಸ ಬದುಕನ್ನು ಆರಂಭಿಸಿದರು. ಅಲ್ಲಿಯೂ ಎಡರು-ತೊಡರುಗಳು ಎದುರಾದವು. ಅವರು ಅವುಗಳನ್ನೆಲ್ಲಾ ಧೈರ್ಯದಿಂದ ಎದುರಿಸಿದರು.

ಇದೇ ವೇಳೆಗೆ ಭಾರತದಲ್ಲಿ ಸ್ವಾತಂತ್ರ್ಯ ಚಳುವಳಿ ಮೊದಲಾಗಿತ್ತು. ಗಾಂಧಿಯಂತಹ ನಾಯಕರು ಉದಯಿಸಿದ್ದರು. ಅಂಬೇಡ್ಕರ್ ತಮ್ಮ ಜನರನ್ನು ಹುರಿದುಂಬಿಸಿದರು, ಎಚ್ಚರಿಸಿದರು. ಕೆಲವು ಕಾರ್ಖಾನೆಗಳಲ್ಲಿ ದಲಿತರು ಕೆಲಸಕ್ಕೆ ಸೇರಿದರು. ವಿಧಾನ ಪರಿಷತ್ತಿನಲ್ಲೂ ಅಸ್ಪೃಶ್ಯರ ಪ್ರತಿನಿಧಿಗಳು ನೇಮಕವಾದರು. ಸಮಾಜ ಸುಧಾರಕರು ಅಸ್ಪೃಶ್ಯತೆಯನ್ನು ಹೋಗಲಾಡಿಸಲು ಮುಂದಾದರು. ದೇಗುಲಗಳನ್ನು ಪ್ರವೇಶಿಸಲು ಅವರಿಗೆ ಅವಕಾಶ ಮಾಡಿಕೊಡಬೇಕೆಂದರು. ಅಂಬೇಡ್ಕರ್ ತಮ್ಮವರನ್ನು ಒಂದುಗೂಡಿಸಿದರು. ವಿದ್ಯೆಯ ಪ್ರಯೋಜನಗಳನ್ನು ತಿಳಿಸಿದರು. ದಲಿತರ ಜೀವನವನ್ನು



ಅಂಬೇಡ್ಕರ್ ಪದವಿ ಪಡೆದರು



ಸ್ವಾತಂತ್ರ್ಯ ಚಳವಳಿ – ಅಂಬೇಡ್ಕರ್ ಭಾಷಣ, ಯುವಕರಿಗೆ ಸ್ಫೂರ್ತಿ

ಉತ್ತಮಗೊಳಿಸಲು ಅವರು ಶ್ರಮಿಸಿದರು. ಅವರ ವಾಸಗೃಹಗಳನ್ನು ಶುಚಿಯಾಗಿಡಬೇಕೆಂದರು. ಅವರ ಆಚಾರ, ವಿಚಾರಗಳನ್ನು ಸುಧಾರಿಸಿಕೊಳ್ಳಬೇಕೆಂದರು. ಕೀಳುಕೆಲಸಗಳನ್ನು ಮಾಡುವುದು ಸಲ್ಲದೆಂದರು. ಅವರಲ್ಲಿ ಸ್ವಾಭಿಮಾನವನ್ನು ಬೆಳೆಸಿಕೊಳ್ಳಲು ಕರೆ ನೀಡಿದರು. ಜನನಾಯಕರಾದರು.

ಇದನ್ನು ಗಮನಿಸಿ ಬ್ರಿಟಿಷ್ ಸರಕಾರವು ಅವರಿಗೆ ಹೆಚ್ಚಿನ ಜವಾಬ್ದಾರಿ, ವಹಿಸಿತು. ಮುಂಬಯಿಯ ಮುನಿಸಿಪಲ್ ಕಾರ್ಪೋರೇಷನ್ನಿನ ಸದಸ್ಯರನ್ನಾಗಿ ನೇಮಿಸಿತು. ಕೇರಿ-ಕೇರಿಗೆ ತಿರುಗಿ ಅಂಬೇಡ್ಕರ್ ಜನರನ್ನು ಭೇಟಿಯಾದರು. ಅವರ ಸಮಸ್ಯೆಗಳನ್ನು ಅರಿತರು. ಇವುಗಳ ಮಧ್ಯೆ ಅವರ ಪತ್ನಿ ಹಾಗೂ ಮಗನ ಆರೋಗ್ಯ ಕೆಟ್ಟಿತು. ಹಣಕಾಸಿನ ಪರಿಸ್ಥಿತಿಯೂ ಉತ್ತಮವಾಗಿರಲಿಲ್ಲ. ಅವರ ಶ್ರಮದ ಫಲವಾಗಿ ಮುಂಬಯಿಯ ಸರ್ಕಾರ ಒಂದು ಮುಖ್ಯ ನಿರ್ಣಯವನ್ನು ಕೈಗೊಂಡಿತು: ಅಸ್ಪೃಶ್ಯರಿಗೆ ಸಾರ್ವಜನಿಕ ಸ್ಥಳಗಳಿಗೆ ಹೋಗಲು ಅನುಮತಿ ನೀಡಿತು! ಅಲ್ಲಿಗೆ ಹೋಗಲು ಅಸ್ಪೃಶ್ಯರಿಗೆ ಧೈರ್ಯ ಇರಲಿಲ್ಲ.

ಅಂಬೇಡ್ಕರ್ ಇಂತಹ ಜನರನ್ನು ಒಂದುಗೂಡಿಸಿದರು. ಸುಮಾರು ಹತ್ತು ಸಾವಿರ ಜನ ದಲಿತರು ಅಂಬೇಡ್ಕರ್ ಅವರ ನಾಯಕತ್ವದಲ್ಲಿ ಹೊರಟರು. ಅವರು ಕೆರೆಯ ದಂಡೆಯ ಮೇಲೆ ಜನರನ್ನು ಉದ್ದೇಶಿಸಿ ಮಾಡಿದ ಭಾಷಣ ಅದ್ಭುತವಾಗಿದ್ದಿತು. ಶತಮಾನಗಳಿಂದ ತಲೆಬಗ್ಗಿಸಿದ್ದ ದಲಿತರ ಮನದಲ್ಲಿ ಧೈರ್ಯ ಮೂಡಿತು. ಅಂದು ಎಲ್ಲ ಅಸ್ಪೃಶ್ಯರು ಚೌಡರ ಕೆರೆ ಎಂಬ ಸಾರ್ವಜನಿಕ ಕೆರೆಯ ನೀರು ಕುಡಿದರು.

ಈ ಘಟನೆಯಿಂದ ಉತ್ತಮರು ಹಾಗೂ ದಲಿತರ ನಡುವೆ ಹೋರಾಟ ನಡೆಯಿತು. ಇಡೀ ದೇಶದಲ್ಲಿ ಇದೇ ಸುದ್ದಿಯಾಯಿತು. ವಿಧಾನ ಸಭೆಯಲ್ಲಿ ಅವರು ದಲಿತರ ಸಮಸ್ಯೆಗಳನ್ನು ಮಂಡಿಸುತ್ತಿದ್ದರು. ದೇಶದ ಗಮನ ಸೆಳೆಯುತ್ತಿದ್ದರು. ಸಭೆಗಳಲ್ಲಿ ಈ ಬಗ್ಗೆ ಮಾತನಾಡಿದರು. ಅನೇಕ ದೇಶದ ನಾಯಕರುಗಳ ಜೊತೆ ಪರಿಚಯ ಬೆಳೆಸಿದರು. ಬ್ರಾಹ್ಮಣರು ಉತ್ತಮರು, ಅಸ್ಪೃಶ್ಯರು ಕೀಳೆಂಬ ಭಾವನೆಯನ್ನು ಅವರು ಖಂಡಿಸಿದರು.




ಅಂಬೇಡ್ಕರ್ ಚೌದರಕೆರೆ ನೀರನ್ನು ಕುಡಿದರು

ಮನು ಎಂಬಾತ 'ಮನುಸ್ಮೃತಿ' ಎಂಬ ಪುಸ್ತಕ ಬರೆದಿದ್ದ. ಅದರಲ್ಲಿ ಜಾತಿಗಳನ್ನು ಕುರಿತು ಹೇಳಲಾಗಿತ್ತು. ಅಂಬೇಡ್ಕರ್ ಇದನ್ನು ಸಾರ್ವಜನಿಕರ ಎದುರು ಸುಟ್ಟರು. ಈ ಪುಸ್ತಕವನ್ನು ಅವರು ದಬ್ಬಾಳಿಕೆಯ ಸಂಕೇತ ಎಂದು ತಿಳಿದಿದ್ದರು. ಇದರಿಂದ ದೇಶದಲ್ಲೆಲ್ಲಾ ಕೋಲಾಹಲವಾಯಿತು. ಮುಂದೆ ನಾಸಿಕ್‌ನಲ್ಲಿದ್ದ ಶ್ರೀರಾಮದೇವರ ಗುಡಿಗೆ ಪ್ರವೇಶಿಸಲು ಬಯಸಿದರು. ಅದಕ್ಕಾಗಿ ಸತ್ಯಾಗ್ರಹ ನಡೆಸಿದರು. ಆದರೆ ಉತ್ತಮರು ಅವರಿಗೆ ಮೋಸಮಾಡಿದರು. ಇದರಿಂದಾಗಿ ಅಲ್ಲಿ ರಕ್ತಪಾತ, ಗಲಭೆಗಳು ಉಂಟಾದವು. ನೂರಾರು ಸಮ್ಮೇಳನಗಳನ್ನು ಅವರು ನಡೆಸಿದರು. ಭಾರತದಲ್ಲಿ ಸ್ವಾತಂತ್ರ್ಯ ಚಳುವಳಿಗೆ ಬಿಸಿಯೇರಿತ್ತು. ಮುಸ್ಲಿಮರು, ಹಿಂದೂಗಳ ನಡುವೆ ಒಗ್ಗಟ್ಟಿರಲಿಲ್ಲ. ದಲಿತರ ಸಮ್ಮೇಳನ ನಾಗಪುರದಲ್ಲಿ ನಡೆಯಿತು. ಇದಕ್ಕೆ ಅಂಬೇಡ್ಕರ್ ಅಧ್ಯಕ್ಷರಾಗಿದ್ದರು.


ಕಾರ್ಮಿಕ ಹಿತವನ್ನು ಬಯಸಿ ಅವರು ಅನೇಕ ಸತ್ಯಾಗ್ರಹಗಳನ್ನು ನಡೆಸಿದರು. ಬ್ರಿಟಿಷ್ ಸರ್ಕಾರದ ಕಾರ್ಮಿಕನೀತಿಯನ್ನು ಅವರು ಒಪ್ಪಲಿಲ್ಲ. ಕಾರ್ಮಿಕರಿಗೆ ದೊರಕುತ್ತಿರುವ ಅನುಕೂಲಗಳು ಏನೂ ಸಾಲದು ಎಂದರು. ಗಾಂಧಿಯವರ ವಿಚಾರಗಳನ್ನು ಅಂಬೇಡ್ಕರ್ ಒಪ್ಪಲಿಲ್ಲ. ಹೀಗಾಗಿ ಅವರು ಕೆಲಸಮಾಡಲು ಸಾಧ್ಯವಾಗಲಿಲ್ಲ. ಮತ್ತೆ ಅವರು ವಿದೇಶಕ್ಕೆ ಒಂದು ವರ್ಷಕಾಲ ಹೋಗಿ ಬಂದರು. ಈ ವೇಳೆಗೆ ಅಂಬೇಡ್ಕರರ ಪತ್ನಿ ಅನಾರೋಗ್ಯದಿಂದ ತೀರಿಕೊಂಡರು. ಇದು ಅಂಬೇಡ್ಕರರಿಗೆ ತುಂಬಾ ನೋವನ್ನುಂಟು ಮಾಡಿದ ಘಟನೆ. ಚುನಾವಣೆಗಳಲ್ಲಿ ಅವರೂ ಸೇರಿದಂತೆ ಸುಮಾರು ಹದಿನೈದು ಜನ ಅಸ್ಪೃಶ್ಯರು ಆಯ್ಕೆಯಾದರು. ಅಂಬೇಡ್ಕರ್ ವಿಧಾನ ಸಭೆಯಲ್ಲಿ ತಮ್ಮ ವಿಚಾರಗಳನ್ನು ಮಂಡಿಸಿದರು. ವಿರೋಧ ಪಕ್ಷದ ನಾಯಕರಾದರು. ಇವರ ಸಾಧನೆಗಳನ್ನು ಕಂಡು ಲಾರ್ಡ್ ವೈಸ್‌ರಾಯ್ ಸಂತಸ ಪಟ್ಟರು. ತಮ್ಮ ಮಂತ್ರಿಮಂಡಲದಲ್ಲಿ ಅಂಬೇಡ್ಕರ್ ಅವರನ್ನು ಕಾರ್ಮಿಕ ಮಂತ್ರಿಯನ್ನಾಗಿ ಸೇರಿಸಿಕೊಂಡರು.

## ಬುದ್ಧನ ಪದತಲದಲ್ಲಿ

ಇಷ್ಟೆಲ್ಲಾ ಸಾಧಿಸಿದರೂ ಅಂಬೇಡ್ಕರ್ ಸುಖಿಯಾಗಿರಲಿಲ್ಲ. ಅವರ ಆರೋಗ್ಯ ಕೆಟ್ಟಿತ್ತು. ಏಕಾಂಗಿತನ ಕಾಡುತ್ತಿತ್ತು. ಅವರನ್ನು ಹಿಂದೂ ಸಮಾಜವು ಹಿಂಸಿಸುತ್ತಿತ್ತು.

ಅವರನ್ನು ಮನುಷ್ಯನೆಂದೇ ಪರಿಗಣಿಸಲಿಲ್ಲ. ಅವರ ಪರಿಚಯದ ಹೆಣ್ಣುಮಗಳು ವೈದ್ಯೆ, ಶಾರದಾ ಕಬೀರ್ ಎನ್ನುವವರನ್ನು ಅವರು ವಿವಾಹವಾದರು. ಭಾರತ ಸ್ವತಂತ್ರವಾಯಿತು. ಭಾರತ ಸರ್ಕಾರವು ಸಂವಿಧಾನ ರಚಿಸಲು ಬಯಸಿತು. ಈ ಸಂದರ್ಭದಲ್ಲಿ ಅಂಬೇಡ್ಕರ್ ತಮ್ಮ ಸಲಹೆಗಳನ್ನು ನೀಡಿದರು. ಸಂವಿಧಾನ ರಚನೆಗೆ ನೆರವಾದರು. ಜವಾಹರಲಾಲರ ಮಂತ್ರಿಮಂಡಲದಲ್ಲಿ ಕಾನೂನು ಮಂತ್ರಿಯಾದರು. ಆದರೆ ಸ್ವಲ್ಪ ಕಾಲದಲ್ಲೇ ಆ ಪದವಿಗೆ ರಾಜೀನಾಮೆ ನೀಡಿದರು.

ಹಿಂದೂಗಳ ಜೊತೆಯಲ್ಲಿ ಬಾಳಲು ಅಸ್ಪೃಶ್ಯರಿಗೆ ಅವಕಾಶವಿಲ್ಲ ಎಂಬುದು ಅವರ ದುಃಖವಾಗಿತ್ತು. ಇಂತಹ ಹಿಂದೂ ಜಾತಿ ತಮಗೆ ಬೇಡ ಎಂದು ನಿರ್ಧರಿಸಿದರು.



ಬೌದ್ಧ ದರ್ಮಕ್ಕೆ ಮತಾಂತರ

ಅನೇಕರ ಜೊತೆ ಮಾತುಕಥೆಗಳಾಯಿತು. ತುಂಬಾ ಯೋಚಿಸಿ ಅವರು ಬೌದ್ಧ ಮತಕ್ಕೆ ಸೇರಲು ಮನಸ್ಸುಮಾಡಿದರು.

ಅವರ ಅರತ್ತೇಳನೆಯ ವಯಸ್ಸಿನಲ್ಲಿ ತಮ್ಮ ಪತ್ನಿಯೊಂದಿಗೆ ಬೌದ್ಧ ಧರ್ಮಕ್ಕೆ ಮತಾಂತರ ಹೊಂದಿದರು. ಒಳಗಿನ ಸಂತಾಪದಿಂದ ಬಿಡುಗಡೆ ಹೊಂದಲು ಬಯಸಿದರು. ಸಾವಿರಾರು ಜನ ಅಸ್ಪೃಶ್ಯರು ತಮ್ಮ ನಾಯಕನ ಹಾದಿ ತುಳಿದರು. ಹಿಂದುತ್ವವನ್ನು ಬಿಟ್ಟು ಬೌದ್ಧರಾದರು. ಸಮಾಜದಲ್ಲಿ ಸ್ಥಾನವನ್ನು ಗಳಿಸಿಕೊಂಡರು.

ಅಂಬೇಡ್ಕರ್ ಬುದ್ಧನನ್ನು ಕುರಿತ ಪುಸ್ತಕ ರಚಿಸಲು ತೊಡಗಿದರು. ಅವರ ಕಾಲಿನ ನೋವು ಹೆಚ್ಚಾಯಿತು. ಆರೋಗ್ಯವೂ ಚೆನ್ನಾಗಿರಲಿಲ್ಲ. ಬೌದ್ಧಗುರು ದಲೈಲಾಮ ಅವರನ್ನು ಭೇಟಿಮಾಡಿದರು. ಬುದ್ಧನ ಬೋಧನೆಗಳಿಗೆ ತಲೆಬಾಗಿದರು. ಡಿಸೆಂಬರ್ ಆರು, ಸಾವಿರದ ಒಂಭೈನೂರ ಐವತ್ತೇಳು ಅಂದರೆ ಅವರ ಅರವತ್ತೆಂಟನೆಯ ವಯಸ್ಸಿನಲ್ಲಿ ಅಂಬೇಡ್ಕರ್ ಅವರು ತೀರಿಕೊಂಡರು. ನಿದ್ದೆಯಲ್ಲೇ ಅವರ ಪ್ರಾಣ ಹೊರಟುಹೋಯಿತು. ತಮ್ಮ ಜೀವನದಲ್ಲಿ ಬರೀ ನೋವನ್ನೇ ಅನುಭವಿಸಿದವರು ಡಾ. ಅಂಬೇಡ್ಕರ್. ಆದರೆ ದಲಿತರನ್ನು ಮುಂದೆ ತಂದ ಕೀರ್ತಿ ಅವರದಾಯಿತು.

ಗಂಧದ ಕೊರಡನ್ನು ತೇಯ್ದಷ್ಟೂ ಪರಿಮಳ ಬರುತ್ತದೆಯಲ್ಲವೆ? ಹಾಗೆಯೇ, ಅಂಬೇಡ್ಕರ್ ತಮ್ಮ ದೇಹವನ್ನು ದಂಡಿಸಿ, ತಮ್ಮ ಬಾಂಧವರಿಗೆ ಉಪಕಾರ ಮಾಡಿದರು. ಮನುಷ್ಯತ್ವವನ್ನು ಮೆರೆದರು. ಎಲ್ಲರಿಗೂ ಆದರ್ಶವಾದರು. ಉತ್ತಮರ ಕಣ್ಣು ತೆರೆಸಿದರು. ಭಾರತದಲ್ಲಿದ್ದ ಕ್ರೂರ ಪದ್ಧತಿಯನ್ನು ಹೋಗಲಾಡಿಸಲು ಪ್ರಯತ್ನಪಟ್ಟರು. ಅವರ ಬಾಳು ನಮ್ಮೆಲ್ಲರಿಗೂ ಮಾದರಿಯಾಗಲಿ, ಅಲ್ಲವೆ?

✤ ✤ ✤ ✤

ಕನ್ನಡ ವಿ … ಕ್ರಮ
ಹಾಗೂ … ಚನಾ
ವಿಭಾಗ'ಕ … ರಚನೆ
ಮಾಡಬೇ … ಗಾಗಿ
ಪುಸ್ತಕ … ರು.
ವಿಶ್ವವಿದ … ನ್ನು,
ಭಾಷಾತ … ಯ,
ಸಲಹೆ, ಸ … ್ಯಾಸ,
ಚಿತ್ರಗಳ … ರ್ಣಿಸಿ
ಯೋಜನೆ …

ನವಸಾಕ್ಷರ … ರುವ
ಪುಸ್ತಕಗಳ … ಂದ
ಪರಿಶೀಲಿಸ … ರಿಗೆ
ಕಮ್ಮಟಗಳ … ಕಿಲ್ಲೆ,
ತಾಲೂಕು … ದರ
ಗುಣದೋ … ದ
ಗಣಕಯಂ … ತಿದ್ದ
ಮಾಹಿತಿಗಳ … ದ
ಆದ್ಯತೆಗಳನ … ಮ್ಮ
ವಿಶ್ವವಿದ್ಯಾಲ … ರು.
ಕಲಾವಿದರು … ನ್ನು
ನವಸಾಕ್ಷರರ … ನ್ನು
ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊಳಿಸಲಾಯಿತು.

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರದಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿ ಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

**ಚಂದ್ರಶೇಖರ ಕಂಬಾರ**
ಕುಲಪತಿಗಳು